ಏನಾಯ್ತು?' ಅಂತ ಕೇಳಿದರು. ಮಗ ಎಲ್ಲ ವಿಷಯ ಹೇಳಿದ. 'ಈ ಸರ್ತಿ ಆಸ್ಪತ್ರೆಯಲ್ಲಿ ಹೆಚ್ಚುದಿನ ಉಳೀಬೇಕಾಗ್ತದೆ ಅಂತ ಕಾಣ್ತದೆ. ಯಾರು ಸಾ ಜನ ಸಿಗ್ತಾ ಇಲ್ಲ' ಅಂತ ಹೇಳಿದ. ಅದಕ್ಕೆ ಅವರು, 'ನೀವು ಮಂಡೆ ಬಿಸಿ ಮಾಡುದೇ ಬೇಡ. ನನ್ನ ಮಗ ವಿವೇಕ ಇದ್ದಾನೆ. ಅವನನ್ನು ಕಳಿಸ್ತೇನೆ. ಅವ ಹೇಗೂ ಮನೆಯಿಂದ್ಲೇ ಕೆಲಸ ಮಾಡುವವ. ಆವತ್ತಿಂದ ಮನೆ ಬದಿಗೇ ಇದ್ದ ಹೆಂಡತಿ ಮಕ್ಕಳನ್ನು ಕಟ್ಟಿಕೊಂಡು. ಒಂದು ಕಾಲದಲ್ಲಿ ನಿನ್ನ ಅಪ್ಪಯ್ಯ ನನ್ನ ಮನೆಗೆ ಮಾಡಿದ ಉಪಕಾರ ಮರೀಲಿಕ್ಕೆ ಉಂಟಾ? ನೀನು ಯೆಂತ ಸಾ ಮಂಡೆಬಿಸಿ ಮಾಡುದು ಬೇಡ. ವಿವೇಕನನ್ನು ಕಳಿಸಿಕೊಡ್ತೇನೆ' ಅಂತ ಹೇಳಿ ಧೈರ್ಯ ತುಂಬಿದ್ದರು. ಹೀಗೆ ವಿವೇಕ ಗೋವಿಂದ ರಾಯರನ್ನು ನೋಡಿಕೊಳ್ಳಿಕ್ಕೆ ಅಂತ ಬಂದಿದ್ದ.

ರಾಯರ ಮಗ ದಿನಾ ಹಗಲಿಗೆ ಅನಸೂಯಮ್ಮನನ್ನು ಆಸ್ಪತ್ರೆಗೆ ತಂದು ವಿವೇಕನ ಒಟ್ಟಿಗೆ ಬಿಟ್ಟು, ಸಂಜೆ ಆಫೀಸಿನಿಂದ ಮನೆಗೆ ಹೋಗುವಾಗ ಕರ್ಕೊಂಡು ಹೋಗ್ತಿದ್ದ. ವಿಸಿಟಿಂಗ್ ಅವರ್ಸ್‌ನಲ್ಲಿ ಒಂದೆರಡು ದಿನ ಮಗನೇ ಐಸೀಯೂನ ಒಳಗೆ ಹೋಗಿ ರಾಯರನ್ನು ಕಾಣಲು ಹೋಗಿದ್ದ. ರಾಯರಿಗೆ ಯೆಂತಕ್ಕೋ ಮಗ, ಸೊಸೆ ಇವರನ್ನೆಲ್ಲ ನೋಡುದೇ ಬೇಡ, ತಾನು ಇದ್ರೆ ಎಷ್ಟು ಹೋದ್ರೆ ಎಷ್ಟು ಅಂತೆಲ್ಲ ಅನಿಸ್ತಾ ಇತ್ತು. ಆವತ್ತು ಊಟ ತಿಂಡಿ ಸಾ ಸರಿಕಟ್ಟು ಮಾಡ್ಲಿಲ್ಲ. ಐಸೀಯೂನ ಒಳಗೆ ಹೋದಾಗ ನರ್ಸುಗಳು ಮಗನ ಹತ್ರ ಕಂಪ್ಲೈಂಟ್ ಹೇಳಿದ್ರು. 'ಯೆಂತಕ್ಕೆ ಅಪ್ಪಾ ಹೀಗೆ ಮಾಡ್ತೀರಿ? ಬೇಗ ಹುಷಾರಾಗೂದು ಬೇಡವಾ?' ಅಂತ ಮಗ ಬುದ್ಧಿವಾದ ಹೇಳಿದ್ರೆ ಕೆಕ್ಕರಿಸಿ ನೋಡಿದ್ರು ಶಿವಾಯಿ ಎಂತ ಸಾ ಮಾತಾಡ್ಲಿಲ್ಲ. ಕಡೆಗೆ ಡಾಕ್ಟ್ರ ಸ್ಪೆಷಲ್ ಪರ್ಮಿಷನ್ ತೆಕ್ಕೊಂಡು ಅನಸೂಯಮ್ಮನನ್ನು ಒಳಗೆ ಕರ್ಕೊಂಡು ಹೋದ ಮಗ. ಅವರು ಪ್ರೀತಿಯಿಂದ ಮಾತಾಡಿಸಿ ಗಂಜಿ ನೀರನ್ನು ಬಾಯಿಗೆ ಹಾಕಿದ್ರೆ ಪುರ್ ಅಂತ ಉಗುಳಿ ವ್ಯಂಗ್ಯದ ನಗೆ ನಕ್ಕರು. ಕಣ್ಣಲ್ಲಿ ನೀರು ತುಂಬಿಕೊಂಡು ಅವರು ಹೊರಗೆ ಬಂದರು. ಮರುದಿವಸ ವಿವೇಕ ವಿಸಿಟಿಂಗ್ ಅವರ್‌ನಲ್ಲಿ ಒಳಗೆ ಹೋದ.

ವಿವೇಕನನ್ನು ಕಾಣ್ತಾ ಇದ್ದ ಹಾಗೇ ರಾಯರ ಮುಖ ಅರಳಿತು. ಮಾತಾಡ್ಲಿಕ್ಕೆ ಕಷ್ಟ ಆದ್ರೂ ನರಕಿಕೊಂಡೇ



ಅವನ ಸಂಸಾರದ ಬಗ್ಗೆ, ಊರಿನ ಬಗ್ಗೆ ಮಾತಾಡಿದ್ರು. ಅವ ಪ್ರೀತಿಯಿಂದ ಕುಡಿಸಿದ ಗಂಜಿಯನ್ನು ಕುಡಿದಿದ್ದರು. ಐಸೀಯೂ ಇನ್ ಛಾರ್ಜ್‌ನವರು, 'ನಾಳೆಯಿಂದ ನೀವೇ ಬನ್ನಿ. ಸ್ವಲ್ಪ ಗೆಲವಾಗಿ ಇರ್ತಾರೆ' ಅಂತ ಹೇಳಿದ್ದರು. ಹೀಗಾಗಿ, ಡೈಲಿ ವಿವೇಕನೇ ಹೋಗಿ ನೋಡಿಕೊಂಡು ಬರ್ತಿದ್ದ. ಆವತ್ತೊಂದು ದಿನ ಹೋಗಿದ್ದಾಗ, 'ವಿವೇಕಾ... ನಾಳೆ ನೀನು ಬರುವಾಗ ಯಾರಿಗೆ ಸಾ ಕಾಣದ ಹಾಗೆ ಬೀಡ ತೆಕ್ಕೊಂಡು ಬಾರಾ. ತುಂಬ ದಿನ ಆಯಿತು. ಬಾಯಿ ಚಪ್ಪೆ ಚಪ್ಪೆ ಆಗ್ತಾ ಉಂಟು' ಅಂತ ಕಣ್ಣಲ್ಲಿ ನೀರು ತುಂಬಿಕೊಂಡು ಹೇಳಿದ್ದರು. ವಿವೇಕನಿಗೆ ರಾಯರ ಬೇಡಿಕೆಯನ್ನು ಕೇಳಿ ಗಾಬರಿ ಆಯಿತು. ಐಸಿಯೂನಲ್ಲಿ ಇರುವ ಪೇಷೆಂಟಿಗೆ ಹೊರಗಡೆಯದ್ದನ್ನು ಎಂಥದೂ ಕೊಡ್ಲಿಕ್ಕಿಲ್ಲ ಅಂತ ಹೇಳುವ ವಿಷಯ ಅವನಿಗೆ ಗೊತ್ತಿತ್ತು. ಆದ್ರೆ, ಪ್ರಾಯ ಆದ ಜೀವ. ಏನೋ ಆಸೆಬಿಡ್ತಾ ಇದೆ. ಅದನ್ನು ಈಡೇರಿಸದೇ ಆ ಜೀವಕ್ಕೆ ನೋವು ಕೊಡ್ಲಾ ಅನ್ನುವ ಗೊಂದಲಕ್ಕೆ ಬಿದ್ದ. ಕೊನೆಗೆ ಎಂಥದಾದ್ರೂ ಆಗ್ಲಿ. ಯಾರಿಗೆ ಸಾ ಕಾಣದ ಹಾಗೆ ಬೀಡ ತೆಕ್ಕೊಂಡು ಹೋಗಿ ಕೊಡೂದು ಅಂತ ತೀರ್ಮಾನಿಸಿದ.

ಆವತ್ತು ಸಂಜೆ ವಿಸಿಟಿಂಗ್ ಟೈಂನಲ್ಲಿ ಮುಷ್ಟಿಯಲ್ಲಿ ಹಿಡ್ಕೊಂಡಿದ್ದ ಎಲೆ ಅಡಿಕೆ ಸುಣ್ಣವನ್ನು ಮೆಲ್ಲ ರಾಯರ ಕೈ ಒಳಗೆ ತೂರಿಸಿದ. ರಾಯರು ಎತ್ತಿ ಹಾಕಿಕೊಳ್ಳಿಕ್ಕೆ